5A

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರಿಸುವ ಬಗ್ಗೆ.**

**ವಿಷಯ:**

ನಿತ್ಯ ಲಕ್ಷಾಂತರ ಪ್ರಯಾಣಿಕರಿಗೆ ಸಾರಿಗೆ ಸೇವೆ ಒದಗಿಸುತ್ತಿರುವ ಆಟೋ ಚಾಲಕರು ಸರ್ಕಾರದ "ಶಕ್ತಿ" ಯೋಜನೆಯಿಂದ ರಿಕ್ಷಾಗಳು ಪ್ರಯಾಣಿಕರಿಲ್ಲದೆ ಸಂಕಷ್ಟದಲ್ಲಿವೆ. ನಿತ್ಯ ಆಟೋ ರಿಕ್ಷಾಗಳನ್ನು ಓಡಿಸಿ ಬದುಕುತ್ತಿದ್ದ ನಾವು ಪ್ರಯಾಣಿಕರಿಲ್ಲದೆ ಬಿಕೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ದೈನಂದಿನ ದುಡಿಮೆಯಿಂದ ಬಂದ ಹಣ ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ, ಊಟ ವಸತಿ ಪೂರೈಸುತ್ತಿದ್ದು, ಇದೀಗ ರಿಕ್ಷಾಗಳ ಬಾಡಿಗೆ ಇಲ್ಲದಿರುವುದರಿಂದ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಈ ಕುರಿತು ಮಾನ್ಯ ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವರ ಸಹಿತ ಸರ್ಕಾರಕ್ಕೆ ಕೊಟ್ಟ ಮನವಿಗಳು ಯಾವುದೇ ಪ್ರಯೋಜನ ಕಂಡಿಲ್ಲ. ರಾಜ್ಯದಾದ್ಯಂತ ಲಕ್ಷಾಂತರ ರಿಕ್ಷಾ ಚಾಲಕರಾದ ನಾವು ಬದುಕು ಕಟ್ಟಿಕೊಳ್ಳಲಾಗದೆ ಉಪವಾಸ ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ. ನಿತ್ಯದ ದುಡಿಮೆಯಿಂದ ನಮ್ಮ ಸಂಸಾರ ಸಾಗುವುದು ನಿಂತು ಹೋಗಿದೆ. ಸರ್ಕಾರಕ್ಕೆ ನಾವು ಸಲ್ಲಿಸಿದ ಮನವಿಯಲ್ಲಿ ನಿರುದ್ಯೋಗಿಗಳಾಗುತ್ತಿರುವ ರಿಕ್ಷಾ ಚಾಲಕರಿಗೆ ತಮ್ಮ ರಿಕ್ಷಾದ ಸಾಲದ ಕಂತುಗಳನ್ನೂ ಕಟ್ಟಲು ಆಗುತ್ತಿಲ್ಲ ಎನ್ನುವ ಕಾರಣಕ್ಕಾಗಿ ತಿಂಗಳಿಗೆ ಕನಿಷ್ಠ 10 ಸಾವಿರ ರೂಪಾಯಿ ಪರಿಹಾರ ನೀಡಬೇಕೆಂದು ಮನವಿ ಮಾಡಿದ್ದಾರೆ. ಆದರೆ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ರಾಜ್ಯ ರಿಕ್ಷಾ ಚಾಲಕರ ಸಂಘದ ಅಧ್ಯಕ್ಷರು ಹಾಗೂ ರಾಜ್ಯದ ವಿವಿಧ ಜಿಲ್ಲೆ ತಾಲ್ಲೂಕುಗಳಲ್ಲಿ ಒಕ್ಕೊರಲ ಬೇಡಿಕೆ ಸಲ್ಲಿಸಿದ್ದಾರೆ.

ಈ ಹಿನ್ನಲೆಯಲ್ಲಿ ಸರ್ಕಾರ ಕನಿಷ್ಠ ಸೌಜನ್ಯಕ್ಕೂ ರಿಕ್ಷಾ ಚಾಲಕರ ಸಂಘದ ಪದಾಧಿಕಾರಿಗಳನ್ನು ಕರೆದು ಮಾತನಾಡಿಲ್ಲ ಎಂಬ ನೋವಿನ ನುಡಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಕರ್ನಾಟಕ ರಾಜ್ಯದಲ್ಲಿ ಸಂಕಷ್ಟದಲ್ಲಿರುವ ಬಡ ರಿಕ್ಷಾ ಚಾಲಕರ ಪರವಾಗಿ ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುವುದೇನೆಂದರೆ, ತಕ್ಷಣ ರಾಜ್ಯ ರಿಕ್ಷಾ ಚಾಲಕರ ಸಂಘದ ಪದಾಧಿಕಾರಿಗಳನ್ನು ವಿಧಾನಸೌಧಕ್ಕೆ ಕರೆದು, ಬಡ ರಿಕ್ಷಾ ಚಾಲಕರಿಗೆ ತಿಂಗಳಿಗೆ ಕನಿಷ್ಠ 10 ಸಾವಿರ ಪರಿಹಾರ ನೀಡುವುದರ ಜೊತೆಗೆ ರಿಕ್ಷಾ ಚಾಲಕರ ಬದುಕಿಗೆ ಶಕ್ತಿ ನೀಡುವಂತೆ ಮಾನ್ಯ ಸಾರಿಗೆ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಶೂನ್ಯ ವೇಳೆಯಲ್ಲಿ ಆಗ್ರಹಿಸುತ್ತೇನೆ.

**ಉತ್ತರ:**

ಕರ್ನಾಟಕ ಸರ್ಕಾರವು ದಿನಾಂಕ:11-06-2023 ರಿಂದ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಶಕ್ತಿ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ಯೋಜನೆಯಿಂದ ಆಟೋರಿಕ್ಷಾಗಳಿಗೆ ಪ್ರಯಾಣಿಕರು ಹೆಚ್ಚಾಗಿ ಸಂಚರಿಸದೆ ಇರುವ ಬಗ್ಗೆ ವಿವಿಧ ಆಟೋಚಾಲಕರ ಸಂಘಟನೆಗಳಿಂದ ಮನವಿಗಳು ಇತ್ತೀಚೆಗೆ ಸ್ವೀಕೃತವಾಗಿರುತ್ತವೆ. ಈ ಯೋಜನೆಯು ಪ್ರಾರಂಭಿಕ ಹಂತದಲ್ಲಿರುವುದರಿಂದ ಮುಂದಿನ ದಿನಗಳಲ್ಲಿ ಸಂಬಂದಪಟ್ಟ ಸಂಘಟನೆಗಳವರೊಂದಿಗೆ ಚರ್ಚಿಸಲಾಗುವುದು.

ಟಿಡಿ 53 ಟಿಡಿಕ್ಯೂ 2023

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು.**